ಸರ್ಕಾರದಲ್ಲಿ ತೀರ್ಮಾನ ಮಾಡಿದ್ದೇವೆ. ಅದರಂತೆ ಮಂತ್ರಾಲಯದಲ್ಲಿ ಸಹಿತ ನಮ್ಮ ಛತ್ರಗಳು ಇದ್ದು ಲಾಭದಾಯಕವಾಗಿ ನಡೆಯುತ್ತಿದೆ. ಅದು ಬಹಳ ಚೆನ್ನಾಗಿ ಸುಸಜ್ಜಿತವಾಗಿ ನಡೆದುಕೊಂಡು ಹೋಗುತ್ತಿದೆ. ಅದನ್ನೂ ಕೂಡ ನಾನು ವೀಕ್ಷಣೆ ಮಾಡಿದ್ದೇನೆ. ಇನ್ನು ಮುಂದೆ ತಿರುಪತಿಯಲ್ಲಿ ಮಾಡತಕ್ಕದ್ದಕ್ಕೆ ಅವರೇ ಉತ್ತರವನ್ನು ಹೇಳಿದರು. ನಾನು ಅದನ್ನು ಪರಿಶೀರಿಸುತ್ತೇನೆ ಹಾಗೂ ಅದರ ವ್ಯವಸ್ಥೆ ಮಾಡಲು ಸರ್ಕಾರ ತೀರ್ಮಾನವನ್ನು ಮಾಡುತ್ತದೆ.

ಅಧ್ಯಕ್ಷರು:- ಆಯಿತು ಇನ್ನೇನೂ ಬೇಡ, ಬಹಳ ಜಾಸ್ತಿ ಆಯಿತು. ವಾರಣಾಸಿಗೂ ಕೊಡಿಸೋಣ ಬಿಡಿ.

ವಿಷಯ:- ಸಕಲೇಶಪುರದಲ್ಲಿ ಕರ್ನಾಟಕ ಗೃಹಮಂಡಳಿ ವತಿಯಿಂದ ನಿರ್ಮಿಸಿದ ಮನೆಗಳ ಸಂಖ್ಯೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 90 (511)

ಶ್ರೀ ಬಿ.ಬಿ.ಶಿವಪ್ಪ, ಎಂಎಲ್ಎ:- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಕಲೇಶಪುರದಲ್ಲಿ ಕರ್ನಾಟಕ ಗೃಹಮಂಡಳಿ ಕಳೆದ ಮೂರು ವರ್ಷಗಳಲ್ಲಿ ನಿರ್ಮಿಸಿದ ಮನೆಗಳೆಷ್ಟು?

ಆ) ಈ ಪ್ರದೇಶಗಳಲ್ಲಿ ನೀಡುವ ಮೂಲಭೂತ ಸೌಲಭ್ಯಗಳಾವುವು?

ಇ) ಸದರಿ ಮನೆಗಳನ್ನು ಹಂಚಲಾಗಿದೆಯೇ?

ಈ) ಇಲ್ಲದಿದ್ದಲ್ಲಿ ಕಾರಣವೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):-

ಅ) ಸಕಲೇಶಪುರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ವಿವಿಧ ವರ್ಗದ ಮನೆಗಳನ್ನು ಈ ಕೆಳಕಂಡಂತೆ ನಿರ್ಮಿಸಲಾಗಿದೆ.

ಇ.ಡಬ್ಲ್ಯೂಎಸ್	- 18
ಎಲ್ಐಜಿ-1	- 20
ಎಲ್ಐಜಿ-2	- 16
ಎಂಐಜಿ-1	- 20
ಎಂಐಜಿ-2	- 08
ಹೆಚ್ಐಜಿ	- 06
	83

ಆ) ಈ ಪ್ರದೇಶಕ್ಕೆ ನೀಡುವ ಮೂಲಭೂತ ಸೌಲಭ್ಯಗಳಾವುವೆಂದರೆ, ರಸ್ತೆ, ವಿದ್ಯುತ್, ನೀರು ಮತ್ತು ಒಳಚರಂಡಿ ವ್ಯವಸ್ಥೆ.

ಇ) 49 ಮನೆಗಳನ್ನು ಹಂಚಲಾಗಿದೆ. ವರ್ಗವಾರು ವಿವರ ಕೆಳಕಂಡಂತಿದೆ.

ಇ.ಡಬ್ಲ್ಯೂಎಸ್	- 16
ಎಲ್ಐಜಿ- 1	- 3
ಎಲ್ಐಜಿ- 2	- 14
ಎಂಐಜಿ- 1	- 04
ಎಂಐಜಿ- 2	- 06
ಹೆಚ್ಐಜಿ	- 06
	49

ಈ) ಉಳಿಕೆ 39 ಮನೆಗಳಿಗೆ ಹಂಚಿಕೆ ಕೋರಿ, ಕರ್ನಾಟಕ ಗೃಹಮಂಡಳಿಯಲ್ಲಿ ಯಾವ ಅರ್ಜಿಗಳೂ ಬಾಕಿ ಇರುವುದಿಲ್ಲ.

ಶ್ರೀ ಬಿ.ಬಿ.ಶಿವಪ್ಪ:- ಮಾನ್ಯ ಅಧ್ಯಕ್ಷರೆ, ಸಕಲೇಶಪುರದಲ್ಲಿ ಕಳೆದ ಮೂರು ವರ್ಷಗಳಿಂದ 83 ಗೃಹಮಂಡಲಿಯ ವಿವಿಧ ವರ್ಗಗಳ ಮನೆಗಳನ್ನು ಕಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಬೇಕಾದ ಸೌಕರ್ಯಗಳೇನು ಎಂದು ಹೇಳಿದರೆ ರಸ್ತೆ, ವಿದ್ಯುತ್, ಮತ್ತು ನೀರು, ಒಳಚರಂಡಿಯನ್ನು ಒದಗಿಸುತ್ತೇವೆಂದು ಉತ್ತರ ಕೊಟ್ಟಿದ್ದಾರೆ. 49 ಮನೆಗಳನ್ನು ಹಂಚಲಾಗಿದೆ, 39 ಮನೆಗಳಿಗೆ ಯಾವುದೇ ಅರ್ಜಿ ಬರಲಿಲ್ಲ, ಇಷ್ಟು ಉತ್ತರಗಳನ್ನು ಕೊಟ್ಟಿದ್ದಾರೆ. 49 ಮನೆಗಳಲ್ಲಿ ಎಷ್ಟು ಜನ ವಾಸಕ್ಕೆ ಬಂದಿದ್ದಾರೆ, 39 ಮನೆಗಳಿಗೆ ಅರ್ಜಿಗಳು ಬಾರದೆ ಇರಲು ಕಾರಣವೇನು? ಮೂಲ ಭೂತ ಸೌಲಭ್ಯಗಳಾದ ರಸ್ತೆ, ವಿದ್ಯುತ್ ಮತ್ತು ಒಳಚರಂಡಿ ವ್ಯವಸ್ಥೆ ಆಗಿದೆಯೇ? ಮೊದಲು ನಿಗದಿ ಪಡಿಸಿದ ಬೆಲೆ ಏನು? ಈಗ ನಿಗದಿಪಡಿಸುವ ಬೆಲೆ ಏನು? ಮಾನ್ಯ ಸಚಿವರು ಈ ವಿವರಗಳನ್ನು ದಯಮಾಡಿ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಸಭಾಧ್ಯಕ್ಷರೆ, ಸಕಲೇಶಪುರದಲ್ಲಿ ಗೃಹ ನಿರ್ಮಾಣಮಂಡಲಿಯಿಂದ ಸುಮಾರು 88 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಅದರಲ್ಲಿ 49 ಮನೆಗಳನ್ನು ಲಾಟರಿ ಮುಖೇನ ಈಗಾಗಲೇ ಫಲಾನುಭವಿಗಳಿಗೆ ಹಂಚಲಾಗಿದೆ. ಆದರೆ 12 ಮನೆಯವರು ಮಾತ್ರ ಹಣ ಕಟ್ಟಿದ್ದಾರೆ. ಬಾಕಿ ಉಳಿದ 37 ಮನೆಯವರು ಹಣ ಕಟ್ಟಿಲ್ಲ. ರಸ್ತೆ ಮತ್ತು ನೀರಿನ ವ್ಯವಸ್ಥೆ, ವಿದ್ಯುದ್ದೀಕರಣಕ್ಕೆ 22 ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದ ತಕ್ಷಣ ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ರಸ್ತೆ ಮತ್ತು ವಿದ್ಯುದ್ದೀಕರಣ ಕೆಲಸ ಮಾಡುತ್ತೇವೆ. ಆದರೆ ಇಲ್ಲಿಯವರೆಗೆ ಯಾರೂ ವಾಸಕ್ಕೆ ಹೋಗಿಲ್ಲ. ವಾಸಕ್ಕೆ ರಸ್ತೆ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೇ ಇರುವುದರಿಂದ ಹೋಗಿಲ್ಲ. ಕುಡಿಯುವ

ನೀರಿನ ವ್ಯವಸ್ಥೆಯನ್ನು ಮಾಡಲು 1990ರಲ್ಲಿ ಬೋರ್‌ವೆಲ್ ಕೊರೆದಿದ್ದು ಆದರೆ ಬೋರ್‌ವೆಲ್‌ನಿಂದ ನೀರು ಬರದೇ ಇದ್ದುದರಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಪುರಸಭೆಯ ವತಿಯಿಂದ ಮಾಡಬೇಕೆಂದು ತಿಳಿಸಿದ್ದೇವೆ. ಅದನ್ನು ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಶಿವಪ್ಪನವರೇ, ನಿಮ್ಮ ಪ್ರಶ್ನೆಗೆ ಅಲ್ಲೇ ಉತ್ತರ ಇದೆ. ಇನ್ನೂ ಕೆಲವು ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೇ ಇರುವುದರಿಂದ ವಾಸಕ್ಕೆ ಇನ್ನೂ ಪೂರ್ಣ ಯೋಗ್ಯ ಆಗಿಲ್ಲ. ಆದ್ದರಿಂದ ಈಗ ತೆಗೆದುಕೊಂಡಿರುವವರೂ ಹೋಗಿಲ್ಲ, ಬೇರೆ ಜನ ಅರ್ಜಿಯನ್ನು ಕೊಟ್ಟಿಲ್ಲ. ವಾಸಕ್ಕೆ ಯೋಗ್ಯವಾದ ಮನೆಗಳನ್ನು ಮಾಡಿದ ತಕ್ಷಣ ಬಹುಶಃ ಎಲ್ಲರೂ ಬರುತ್ತಾರೆಂದು ಕಾಣುತ್ತದೆ. ಅದಕ್ಕೆ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದು ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ವ್ಯವಸ್ಥೆ ಮಾಡುತ್ತಿದ್ದೇನೆಂದು ಹೇಳಿದ್ದಾರೆ.

ಶ್ರೀ ಬಿ.ಬಿ.ಶಿವಪ್ಪ:- ಮಾನ್ಯ ಅಧ್ಯಕ್ಷರೆ, ಅಷ್ಟು ಮಾತ್ರ ಅಲ್ಲ. ಕಟ್ಟಿರತಕ್ಕ ಕಟ್ಟಡಗಳು ತೀರಾ ಕಳಪೆ ಕಟ್ಟಡಗಳು ಇವೆ. ಹಾಗಾಗಿ ಯಾರೂ ವಾಸಕ್ಕೆ ಹೋಗಲಿಕ್ಕೆ ಇಷ್ಟಪಡುತ್ತಿಲ್ಲ. ಸಕಲೇಶಪುರದಲ್ಲಿ ಮನೆಗೆಳಿಗೆ ತುಂಬಾ ಬೇಡಿಕೆ ಇದೆ. ಮತ್ತು ಇವರು ನಿಗದಿಪಡಿಸಿದ ಮೊದಲಿನ ಬೆಲೆ ಮತ್ತು ಇವತ್ತು ಇವರು ಹೇಳುತ್ತಿರತಕ್ಕ ಬೆಲೆಗೆ ಅಜಗಜಾಂತರ ವ್ಯತ್ಯಾಸ ಇದೆ. ಹೀಗಾಗಿ ಸರ್ಕಾರದ ಹಣ ಯಾವ ಒಂದು ಸದುಪಯೋಗದಿಂದ ಈ ವ್ಯವಸ್ಥೆ ಮಾಡಲಾಯಿತು, ಅದು ಸದುಪಯೋಗ ಆಗತಕ್ಕಂಥ ವ್ಯವಸ್ಥೆಗೆ ಬರಲಿಲ್ಲ. ಆಗುವ ಹಂತದಲ್ಲೂ ಕೂಡ ಇಲ್ಲ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಸಾಕಷ್ಟು ಲಕ್ಷ ರೂಪಾಯಿ ಖರ್ಚಾಗಿ ಬಿಟ್ಟಿರುವುದರಿಂದ ಈ ಅವ್ಯವಹಾರ ಏನು ನಡೆದಿದೆ, ಕಳಪೆ ಕೆಲಸವನ್ನು ಯಾರು ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಂಡು ಕಟ್ಟಡವನ್ನು ವಾಸಕ್ಕೆ ಅನುಕೂಲ ಆಗುವ ರೀತಿಯಲ್ಲಿ ಮಾಡಿ ತಕ್ಷಣ ಹಂಚತಕ್ಕ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದರ ಬಗ್ಗೆ ಸಮಗ್ರ ತನಿಖೆ ಮಾಡಿ ಕಾನೂನು ರೀತಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ:- ಬೆಂಗಳೂರು ನಗರ ಸಾರಿಗೆ ಬಸ್‌ಗಳಲ್ಲಿ ಮಹಿಳೆಯರಿಗೆ ಮೀಸಲಾಗಿಟ್ಟಿರುವ ಆಸನಗಳ ಸದುಪಯೋಗದ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 10 (181)

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?